"ಸರ್, ಅವರು ಏಕೆ ಬರಬೇಕಿತ್ತು? ನಾವೇ ಅವರ ಮನೆಗೆ ಹೋಗಿ ಕಂಪ್ಲೇಂಟ್ ತೆಗೆದುಕೊಂಡು ಬರಬಹುದಿತ್ತು ಅಲ್ಲವಾ... ಕಂಪ್ಲೇಂಟ್ ಕೊಡುವುದಿದ್ದರೆ ನನ್ನ ಸ್ಟೇಷನ್‌ಗೆ ಯಾಕೆ... ಹೈಗ್ರೌಂಡ್ ಅಥವಾ ವಿಧಾನಸೌಧ ಸ್ಟೇಷನ್‌ನಲ್ಲಿಯೇ ದಾಖಲಿಸಬಹುದಿತ್ತಲ್ಲವಾ ಇಲ್ಲಾಂದ್ರೆ... ಹಾಗೆಯೇ ಕೆಲಸ ಮುಗಿಸಬಹುದಿತ್ತು" ಎಂದು ಆತಂಕದಿಂದ ಕೇಳಿದ. ಅವನ ಮನಸ್ಸಿನಲ್ಲಿ ಇದ್ದಿದ್ದು... ಕೇವಲ ಇಷ್ಟು ಸಣ್ಣ ವಿಚಾರಕ್ಕೆ ಗೃಹ ಕಾರ್ಯದರ್ಶಿಗಳೇ ಬರುವುದು ಎಂದರೆ ಏನು... ಎಂಬುದು.

"ನಾನೂ ಅದೇ ಹೇಳಿದೆ. ಆದರೆ ಕೇಳಲಿಲ್ಲ. ಮೊದಲು ಆ ಡ್ರೈವರ್ ಯಾರು, ಅವನೆಲ್ಲಿ ಇದ್ದಾನೆ... ಅವನ ಹತ್ತಿರ ನಿಜವಾಗಲೂ ಸಿಡಿ ಇದೆಯಾ, ಇದ್ದರೆ ಎಲ್ಲಿ ಇಟ್ಟಿದ್ದಾನೆ ಎಂಬುದು ತಿಳಿಯಬೇಕು. ಇದೆಲ್ಲ ಆದಷ್ಟು ಬೇಗ, ಯಾವ ಸುದ್ದಿ ಮಾಧ್ಯಮಗಳಿಗೂ ತಿಳಿಯದಂತೆ ನಡೆಯಬೇಕು" ಎಂದ ಕಮಿಷನರ್ ಮಾತುಗಳಿನ್ನೂ ಮುಗಿದಿರಲಿಲ್ಲ ಅಷ್ಟರಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್, "ಸರ್ ಮೀಡಿಯಾಗೆ ಸುದ್ದಿ ಹೇಗೆ ಹೋಯಿತು... ಅದೂ ಎಲ್ಲರಿಗೂ... ನಮ್ಮಲ್ಲಿಯೇ ಯಾರೋ ಲೀಕ್ ಮಾಡಿರಬಹುದು ಸರ್... ಇದಕ್ಕೂ ಒಂದು ವಿಚಾರಣೆ ನಡೆಯಬೇಕು ಸರ್."

ಅವನಿಗೆ ಈ ಸಲಹೆಯನ್ನು ಗಂಗಾಧರನೇ ಕೊಟ್ಟಿರಬೇಕೆಂದು ಅನುಮಾನ. ತನ್ನ ಜನಪರ ಕೆಲಸಗಳಿಂದ ಹಾಗೂ ಕೇಸ್‌ನ ಆಳ ಎಷ್ಟಿದೆ ಎಂದು ತಿಳಿಯುವುದರಲ್ಲಿ ನಿಷ್ಣಾತನಾಗಿದ್ದ ಗಂಗಾಧರನನ್ನು ಕಂಡರೆ ಅವನಿಗೆ ಅಷ್ಟಕ್ಕಷ್ಟೇ!

ಅವನ ಮಾತಿಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳದ ಕಮಿಷನರ್, "ಅದೆಲ್ಲ ಆಮೇಲೆ ನೋಡಿಕೊಳ್ಳೋಣ. ಎಸಿಪಿ ಶಿವಣ್ಣನ ನೇತೃತ್ವದಲ್ಲಿ ಒಂದು ಟೀಂ ಮಾಡಿ ಗಂಗಾಧರ್. ನೀವೂ ಅದರಲ್ಲಿರುತ್ತೀರಿ. ನಿಮ್ಮ ಇನ್‌ಫಾರ್ಮರನ್ನು ಕೆಲಸಕ್ಕೆ ಹಚ್ಚಿ. ಆ ಡ್ರೈವರ್ ಮನೆ ಮೇಲೆ ಒಂದು ನಿಗಾ ಇಡಿ. ಅವನ ಸಹಚರರನ್ನು ಎಳೆದು ತಂದು ವಿಚಾರಿಸಿ. ಯಾವುದನ್ನೂ ಸಂಶಯದಿಂದ ಆಚೆ ಇಡಬೇಡಿ. ಸಣ್ಣ ವಿಷಯವಾದರೂ ಸರಿ. ಪ್ರತಿ ಗಂಟೆಗೊಮ್ಮೆ ನನಗೆ ರಿಪೋರ್ಟ್ ಮಾಡುತ್ತಿರಿ" ಎಂದರು.

ಅಷ್ಟರಲ್ಲಿ ಹೊರಗಡೆ ಸದ್ದಾಯಿತು. ಪ್ರೆಸ್‌ನವರ ಗಲಾಟೆಯಿಂದ ಗೃಹ ಕಾರ್ಯದರ್ಶಿ ಬಂದಿರಬಹುದೆಂದು ಕಮಿಷನರ್ ಮತ್ತು ಇತರರು ಹೊರಗೆ ಓಡಿದರು. ತಮ್ಮ ಖಾಸಗಿ ವಾಹನದಲ್ಲಿ ತಾವೇ ಡ್ರೈವ್ ಮಾಡಿಕೊಂಡು ಬಂದಿಳಿದ ಕಾರ್ಯದರ್ಶಿಯನ್ನು ಅಲ್ಲಿದ್ದ ಪತ್ರಕರ್ತರ ಗುಂಪು ಮುತ್ತಿಕೊಂಡಿತು.

ಎಲ್ಲರೂ ಪ್ರಶ್ನೆ ಕೇಳುವವರೇ. ಅವರನ್ನು ತಡೆಯಲು ಪೊಲೀಸರು ಪ್ರಯತ್ನಿಸುತ್ತಿರವಾಗಲೇ–

"ನನ್ನ ಖಾಸಗಿ ವಿಚಾರದಲ್ಲಿ ನಮ್ಮ ಮನೆಯ ಕೆಲಸದವನೊಬ್ಬ ಕೈ ಹಾಕಿದ್ದಾನೆ. ಹಾಗಾಗಿ ನಾನು ಒಬ್ಬ ಖಾಸಗಿ ವ್ಯಕ್ತಿಯಾಗಿಯೇ ದೂರು ಕೊಡಲು ಬಂದಿದ್ದೇನೆ. ಇದಕ್ಕೆ ಹೆಚ್ಚಿನ ಮಹತ್ವ ಇಲ್ಲ. ಇಲ್ಲಿನ ಕೆಲಸಗಳಿಗೆ ದಯವಿಟ್ಟು ತೊಂದರೆ ಕೊಡಬೇಡಿ..."

ಅವರ ಮಾತುಗಳು ಮುಗಿಯುವಷ್ಟರಲ್ಲಿ ಒಬ್ಬ ವರದಿಗಾರ, "ಸರ್, ನಿಮ್ಮ ಡ್ರೈವರ್ ನಿಮ್ಮದೊಂದು ಅಶ್ಲೀಲ ಸಿಡಿ ಮಾಡಿ ಅದನ್ನು ಪತ್ರಿಕೆಗಳಿಗೆ ತಲುಪಿಸುತ್ತೇನೆ ಎಂದು ಬ್ಲಾಕ್‌ಮೇಲ್ ಮಾಡುತ್ತಿದ್ದಾನಂತೆ ಹೌದಾ?"

ಅಲ್ಲಿ ನೆರೆದಿದ್ದ ಇತರ ಪತ್ರಿಕೆಯವರಿಗೆ ಶಾಕ್ ಆಯಿತು. ಎಲ್ಲರಿಗೂ ಆ ವಿಚಾರ ತಿಳಿದಿತ್ತು. ಆದರೆ ಅದನ್ನು ಅಷ್ಟು ನೇರವಾಗಿ ಕೇಳಬೇಕಾ ಬೇಡವಾ ಅನ್ನುವುದೇ ಅವರಿಗಿದ್ದ ಪ್ರಶ್ನೆ. ಅದನ್ನು ಮುರಿದಿದ್ದ ಒಬ್ಬ. ಅದೇ ಹೊತ್ತಿಗೆ ಹೊರಬಂದ ಕಮಿಷನರ್, 'ಸರ್ ಪ್ಲೀಸ್ ಬನ್ನಿ' ಎಂದು ಪತ್ರಕರ್ತರಿಂದ